# ೧೫೩ (೪೨೪)

ನಂಬಿದೆನು ನಂಬಿದೆನೋ ಅಂಬರನಾಭ[೪]+ರಾಗ : ಕಾಂಬೋದಿ; ತಾಳ : ಝಂಪೆ

ನಂಬಿದೆನು ನಂಬಿದೆನು ಅಂಬರನಾಭ
ಕಮಲಾಂಬಕನೆ ಸ್ವಜನ ಕೌಟುಂಬಿ || ಪ. ||

ನಂಬಿದರಿಗಿಂಬು ಕರುಣಾಂಬುಧಿಯೆ ಸಿರಿ ಕೃಷ್ಣಾ ।
ನಂಬಿದೆನು ನಂಬಿದೆನು || ಅ.ಪ. ||

ಶ್ರೀರಮಣ ನಿಮ್ಮ ಪದ ಸುರಭೂರುಹದ ನೆಳಲ
ಸೇರಿ ಸುಖಿಸುವೆನೆಂಬ ಬಯಕೆ
ಸಾರಿನಾ ದಾಸನೆನಿಸಿದೆನು ಸಲಹಯ್ಯ ಮತ್ತಾ ।
ದಾರಿದ್ರನಾನಾದ ಬಳಿಕೆ || ೧ ||

ಯೇಸು ಜನ್ಮದ ದೈನ್ಯವನು ಕಳಿದೆ ತವ ನಾಮ ।
ಘೋಷಣದ ಕೋಶವಶವಾಗೀ ।
ವಾಸುದೇವ ಮುಕುಂದ ಮುರಹರನೆ ಇನ್ನೊಬ್ಬ ।
ರಾಸಿಯನು ಬಿಡಿಸು ಚನ್ನಾಗೀ || ೨ ||

ಕಷ್ಟಕುಮತದ ಮನಿಗಳನು ಬಿಡಿಸಿ ಶ್ರೀಮ-।
ದ್ವಿಟ್ಠಲ ಮಂದಿರದಿ ಪುಟ್ಟಿಸಿದೆ ।
ತುಷ್ಟ ತೀರ್ಥೇಶ ಪ್ರಸನ್ನವೇಂಕಟಕೃಷ್ಣ ।
ಇಷ್ಟಾರ್ಥ ಯನಗೆ ನೀನೆಂದು || ೩ ||

Scanned with CamS

## ೧೬೨ (೪೩೩)

ಸಕಲಾಭಿಷ್ಟಿಯ ಪೂರೈಸೊ[೯]+

ರಾಗ : ತೆಲಗ ಕಾಂಬೋದಿ; ತಾ

ಸಕಲಾಭಿಷ್ಟಿಯ ಪೂರೈಸೊ ।
ವೇಂಕಟಪತೇ ಸರ್ವಾನಿಷ್ಟವ ವಾರಿಸೋ ।
ಭಕತ ವತ್ಸಲ ಭಾಗ್ಯ ದೇವಿಯ ರಮಣಾ ॥ ಪ.

ಸಂಸಾರ ಸಂತಾಪದಲಿ ಬೆಂದದೀತಿ ।
ಲಾಂಶೋಪಶಮವ ಕಾಣೆ ।
ಕಂಸಾರಿ ಕೃಷ್ಣ ಸದ್ವಖ್ಯಾಮೃತಾಬ್ಧಿಲ
ಸಂಸ್ನಾನವನು ಮಾಡಿಸೋ ॥ ೧

ಸೃತಿಯಂಧಕಾರಾದಿ ಪತಿತನಾಗಿಹೆ ಮುಂದೆ ।
ಗತಿಗಾಣೆ, ಗುಣನಿಧಿಯೆ ।
ಯತಿ ಮಧ್ವಮತ ಪ್ರೀಯ ಜ್ಞಾನಾರ್ಕ ಪ್ರಭಿಯಲ್ಲಿ ।
ಅತಿತಮವಂನೋಡಿಸೋ ॥ ೨

ದುರುವಿಷಯ ಧ್ಯಾನ ದಾರಿದ್ರ ನರನೀಗೆ ।
ವಿರತೆ ಐಶ್ವರಿಯವಿತ್ತು ।
ಹರಿ ನಿನ್ನ ಪರಮಭಾಗವತರ ನೆರೆಲಿಟ್ಟುದ್ಧರಿಸೊ
ಪ್ರಸನ್ನವೇಂಕಟಾ ॥ ೩

Scanned with CamS

## ೧೫೨ (೪೨೨.)

ಚಿತ್ತಗೊಟ್ಟು ಶ್ರೀಕೃಷ್ಣ ಕಾಯೋ ಕಂಡ್ಯಾಯನ್ನಾ[(೪)+] ರಾಗ : ಕನ್ನಡ ಕಾಂಬೋದಿ; ತಾಳ :

ಚಿತ್ತಗೊಟ್ಟು ಶ್ರೀಕೃಷ್ಣ ಕಾಯೋ ಕಂಡ್ಯಾಯನ್ನಾ ।
ಮತ್ತಿಲ್ಲಾ ನಾ ನಿನ್ನ ಭೃತರ ಭೃತ್ಯನು ॥ ಪ. ॥

ಕಾಲಾನವರ ಮಂಜುಳಿಯಾ ಥಾಳಿಗೆ ।
ಕೀಳು ಮನ ಮಂತ್ರಿಯಾನುಳಿದ್ಯುಗಾಳೂ ।
ಮೂಲಾ ಬಲಾವೆನ್ನಾ । ಮುರಿದು ತಾ ನೋಡಲು ।
ಕಾಲುರ್ಗೆಟ್ಟಾ ತೀಪ್ಯ ಕಾಲದಲ್ಲೀ ॥ ೧ ॥

ಪಿತ್ತವೆಂಬಾ ಕಿಚ್ಚು ವಾತವ ಕೂಡಿ ಹೆಚ್ಚಲು ।
ಮತ್ತೆ ದೇಪವೆಂಬಾ ಪುರವನೆ ಹತ್ತೀ ।

Scanned with CamS

ಮೊತ್ತಾದ ಶ್ಲೇಷ್ಮವು ತಾ ಸುತ್ತಮುತ್ತಿ ಹಾಗಾ ಇ-।
ನ್ಯತ್ತಾ ಹೋಗುವೆನೆಂದಾ ಸಂ । ಕಟದೊಳಗೆ ॥ ೨ ॥

ತಿಂದೋಡಿ ಬಂಧುಗಳೆಲ್ಲಾ ಕೈಯ್ಯಾ ಬಿಡಲೆನ್ನನು ।
ಮುಂದೆ ಯಮದೂತರು ಬಂದು ನಿಂದಾಗೆ ।
ಯೆಂದಾದರೆ ವಮ್ಮೆನ್ನನದೂದಾ ಕೈಕೊಂಡು ।
ಹಿಂದೆ ಹಾಕೀ ಕೊಂಡೆನ್ನ ಕಾಯೋ ಪ್ರಸನ್ನವೇಂಕಟಕೃಷ್ಣ ॥ ೩ ॥

Scanned with CamS

## ೧೫೪ (೪೨೫)

ನಿನ್ನ ಕಥಾಮೃತವನ್ನುಂಡುಂಡು ಕೃಷ್ಣಾ ಬಹು[೯]+ ರಾಗ : ಸಾರಂಗ; ತಾಳ :

ನಿನ್ನ ಕಥಾಮೃತವನುಂಡುಂಡು ಕೃಷ್ಣಾ ಬಹು ।
ಜನ್ಮಕ್ಕೆತೃಪುತಿಯಾಗದಿರಲಿ ಎನಗೆ ॥ ಪ ॥

ಸುಕೃತಿಯಾ ಮನ ಧರ್ಮದಲ್ಲ್ಯಾದರಾವಿದ್ದಂತೆ ।
ದುಷ್ಕೃತಿಗೆ ಪಾಪಗಳು ಸಾಲದಂತೆ ।
ಸಕಲ ವಾರಿಗೆ ವಾರನಿಧಿ ದಣಿಯದಂತೆ ।
ಸುಕೃಶಾನುವಿಗಾಹುತೆ ನೆರೆಯದಂತೆ ॥ ೧ ॥

ಯೆನಿತು ದಾನಕೆ ವಿಪ್ರನಚಿತ್ತ ತಿರುಗದಂ- ।
ತನುದಿನಾಶ್ವಕೆ ತೃಣಾಪೇಕ್ಷಾದಂತೆ ।
ಘನ ಆಲಸ್ಯದವಗೆ ನಿದ್ರೆ ಪೂರಿಸಾದಂತೆ ॥ ೨ ॥

ಬಾಲಕರಿಗೆ ಕ್ರೀಡೆಯಲ್ಲಿ ಸಂಭ್ರಮಾದಂತೆ ।
ಬಾಲೆರ್ಗೆಲಂಕಾರದಿಚ್ಛೆಯಂತೆ ।
ಪಾಲಗಡಲ ಪ್ರಭು ಪ್ರಸನ್ನವೆಂಕಟಕೃಷ್ಣ ।
ಪಾಲಿಸೆನಗೆ ಭಕ್ತಿ ಶ್ರವಣದುತ್ಸವವಾ ॥ ೩ ॥

Scanned with CamS

# ೧೧೯ (೩೯೦)

**ರಂಗ ಕೊಳಲ ನೂದಲಾಗಿ[೮,೬]★**

ರಾಗ : ನೀಲಾಂಬರಿ; ತಾಳ : ಅಟ್ಟ

ರಂಗ ಕೊಳಲ ನೂದಲಾಗಿ
ಮಂಗಳ ಮಯವಾಯಿತು ಧರೆ ಜ-
ಗಂಗಳ ಜೀವರು ಚೇತನ ಮರೆದು ರಂಗಧ್ಯಾನ ಪರರಾದರು || ಪ. ||

ಬಾಡಿದ ಬಳ್ಳಿಮರ ಗೊನೆ ಒಡೆದು
ತೀಡುವ ಮಂದಮಾರುತನ ಕೂಡಿ ತೂ-
ಗ್ಯಾಡಿದವಲರ (ಗ್ಯಾಡುವ ವನದ?) ಫಲದ ಗೊಂಚಲು ಹಾಡಲೊಲ್ಲವಳಿ ಕುಲಗಳು
ಹೇಡಿಗೊಂಡವು ಜಾಣ್ವಕ್ಕಿ ಗಿಣಿಯು ಮಾ-
ತಾಡದೆ ಗಳಗುಂದಿದವು (ಕಳೆಗುಂದಿದವು?) ಕೋಗಿಲೆ
ಓಡ್ಯಾಟ ವೈರಾಟ ಬಿಟ್ಟು ಖಗಮೃಗವೆಲ್ಲ ಗಾಢ ನಿದ್ರಾವಶವಾದವು || ೧ ||

ಕೆಳಗಿನುದಕುಬ್ಬ್ಯುಬ್ಬಿ (ಕ ಉಕ್ಕೇರಿ?) ಬಂದವು
ತುಳುಕಿ ಚೆಲ್ಲಾಡಿ ನಿಂತಳು ಯಮುನೆ
ಮೇಲೊಡ್ಡೊಡ್ಡಿ ಮೇಘಾಳಿ ಧಾರಿಟ್ಟವು (ಭೋರಿಟ್ಟವು?) ಕಲ್ಲು ಕರಗಿ ನೀರಾದವು
ನಳಿನ ಚಂಪಕ ನಾಗ ಪುನ್ನಾಗ ಪಾ-
ಟಲ ಶಾವಂತಿಗೆ ಕುಂದ ಬಕುಳವು
ಮಾಲತಿ ಜಾಜಿಯು ಪರಿಮಳಂಗೂಡಿ ನೀಲಾಂಗನಂಘ್ರಿಗೆ ನೆರೆದವು(ಯರಗಿದವು?)|| ೨ ||

Scanned with CamS

ಕಚ್ಚಲು ಬಿಗಿದು ತೊರೆದ ಮೊಲೆಯಿಂ
ವತ್ಸಗಳೊಡಲಾಸೆ ಜರಿದೆಳಹಲ್ಲ
ಕಚ್ಚಿ ಅಲ್ಲಿಗಲ್ಲಿಗೆ ನಿಂತವು ತಲೆಯ ಪುಚ್ಚವ ನೆಗಹಿ ನಿಟ್ಟಿಸಿ
ಅಚ್ಯುತನಾ ಕೃತ್ಯ ನೋಡಲು ಸುರರಿ
ಗಚ್ಚರಿಯಾಯಿತು ಅವು ಕಂಡಾನಂದ
ಪೆಚ್ಚಿ (ಪೆಚ್ಚಿ?) ಮುಕುಂದನ ಲೀಲಾವಿನೋದಕೆ ಮೆಚ್ಚಿ ಕುಸುಮವ ಸುರಿದರು || ೩ ||

ಮುದ್ದು ಮೋಹನನ ಮಂಜುಳ ಸಂಗೀತ
ಸದ್ದನಾಲಿಸಿ ಗೋಪಾಂಗನೆರೆಲ್ಲರು
ಬುದ್ಧಿ ಸೂರ್‍ಯಾಡಿದರಾನಂದವಾರಿಧಿಯಲ್ಲಿ ಬಿದ್ದು ಪರವಶರಾದರು
ಸಿದ್ಧ ಮುನಿಜನರಿದ್ದ ಸಮಾಧಿಯೊ-
ಳೆದ್ದೆದ್ದು ಕುಣಿದು ಎದೆದಾವರೆಯ
ಗದ್ದುಗೆಯರಸನೊಲಿಸಿಕೊಂಡರು ಗೆದ್ದರು ಭವಸಮುದ್ರವ || ೪ ||

ಶ್ರೀ ಮನೋಹರ ಮೂರುತಿ ಗೋಪಾಲನು
ಆ ಮಧುಕುಂಜವನದಲ್ಲಿ ತ್ರಿಭಂಗಿಲಿ
ಹೇಮಾಂಬರುಟ್ಟು ಗೀರುಗಂಧ ಕಸ್ತೂರಿನಾಮ ಮುಕುಟ ಕುಂಡಲ್ವೆಳಗಲು
ದಾಮ ವನಮಾಲೆ ರತ್ನಾಭರಣದ
ಸ್ವಾಮಿ ಶ್ರೀ ಪ್ರಸನ್ವೆಂಕಟ ಕೃಷ್ಣನು
ರಾಮಕ್ರಿಯೆ ಗುಂಡಕ್ರಿಯೆ ಮೇಘರಾಗವ ಮಾಡೆ ಸಾಮ ಗಾಯನದಿ ನಮೊ
ಎಂದರು(ಎನ್ನೆ?) || ೫ ||

Scanned with CamS